ದಿನಾಂಕ: ಜನವರಿ 26,2014

# ಗಣರಾಜ್ಯೋತ್ಸವ ದಿನದ ಅನಿಸಿಕೆಗಳು

ಶ್ರೀ ಅರುಣ್ ಜೇಟ್ಲಿ
ವಿರೋಧ ಪಕ್ಷದ ನಾಯಕರು(ರಾಜ್ಯ ಸಭಾ)

ಭಾರತ ಇಂದು ತನ್ನ 65ನೇ ಗಣತಂತ್ರವನ್ನು ಆಚರಿಸಿತು. ಇಂದಿನ ದಿನ ನಾವು ನಮಗಾಗಿ ಸುವಿಸ್ತಾರವಾದ ಸಂವಿಧಾನವನ್ನು ಅಂಗೀಕರಿಸಿಕೊಂಡೆವು. ಸಂಸದೀಯ ಪ್ರಜಾಪ್ರಭುತ್ವ, ಒಕ್ಕೂಟ ವ್ಯವಸ್ಥೆ, ಮೂಲಭೂತ ಹಕ್ಕುಗಳ ಸಂಚಿ, ಸ್ವತಂತ್ರ ನ್ಯಾಯಾಂಗದ ನ್ಯಾಯಿಕ ಸಮೀಕ್ಷೆಯ ಲಕ್ಷಣ, ಇವೇ ನಮ್ಮ ಸಂವಿಧಾನದ ಕೆಲವು ಮುಖ್ಯ ಅಂಶಗಳು.

ಹಲವಾರು ಸವಾಲುಗಳನ್ನು ಮನಗಂಡು, ಈ ಸವಾಲುಗಳನ್ನು ಮೆಟ್ಟಿನಿಲ್ಲುವ ಶಕ್ತಿ ಪ್ರದರ್ಶಿಸಿರುವ ನಮ್ಮ ಪ್ರಜಾಪ್ರಭುತ್ವ ನೋಡಿದಾಗ, ಬಲಿಷ್ಠ ಹಾಗೂ ಅಂತಃಸತ್ವವುಳ್ಳ ಪ್ರಜಾಪ್ರಭುತ್ವ ಹೊಂದಿರುವ ವಿಶ್ವಾಸ ಮೂಡುತ್ತದೆ. ಭವಿಷ್ಯದ ದೃಷ್ಟಿಯಿಂದ ನಾವು ವಹಿಸಬೇಕಾದ ಕೆಲವು ಜಾಗೃತೆಗಳ ಕುರಿತು ತಿಳಿಸಬಯಸುತ್ತೇನೆ. ಬಡತನವು ಭಾರತೀಯ ಸಮಾಜಕ್ಕೆ ಅಂಟಿರುವ ಬಹು ದೊಡ್ಡ ಶಾಪ. ತಮ್ಮ ಜನಸಂಖ್ಯೆಯ ಸುಮಾರು ಶೇಕಡ 30ರಷ್ಟು ಜನರು ಬಡತನ ರೇಖೆಗಿಂತ ಕೆಳಗೆ ಜೀವಿಸುತ್ತಾರೆ. ಗೌರವಯುತ ಬದಕು ನಡೆಸುವ ಹಕ್ಕು ಬಡವರಿಗೆ ಈಗಲೂ ನಿರಾಕರಿಸಲಾಗಿದೆ. ಭಾರತೀಯ ಸಾರ್ವಭೌಮತೆಗೆ ಆತಂಕವಾದ ಮತ್ತು ದಂಗೆಕೋರರಿಂದ ಬೆದರಿಕೆಯುಂಟಾಗಿದೆ. ಆತಂಕವಾದದ ಬೆದರಿಕೆ ಹೊರಗಿನಿಂದ ಮತ್ತು ಆಂತರಿಕವಾಗಿಯೂ ಹೆಚ್ಚಿದೆ. ಈ ವಿಚಾರದಲ್ಲಿ ಕಟ್ಟೆಚ್ಚರ ಸಡಲಿಸಿದರೆ ಅದು ನಮಗೆ ದುಬಾರಿಯಾಗಿ ಪರಿಣಮಿಸಬಹುದು. ಭಾರತದಲ್ಲಿ ರಾಜಕಾರಣದ ಗುಣಮಟ್ಟ ಸುಧಾರಿಸುವ ಅಗತ್ಯವಿದೆ. ರಾಜಕಾರಣದ ಶಕ್ತಿ ತೀವ್ರವಾಗಿದೆ. ರಾಜಕಾರಣಿಗಳು ಅನುಭವಿಸುವ ವ್ಯಾಪಕ ಅಧಿಕಾರಕ್ಕೆ ಸಮನಾದ ಉದಾತ್ತ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುವ ಪ್ರಯತ್ನವನ್ನು ರಾಜಕಾರಣದ ಉಸ್ತುವಾರಿ ವಹಿಸುವವರು ಮಾಡಬೇಕು. ಇಳಿಮುಖ ಕಂಡಿರುವ ರಾಜಕಾರಣದ ಗುಣಮಟ್ಟದ ಪ್ರಭಾವ ಆಳ್ವಿಕೆ ವಿಚಾರದಲ್ಲೂ ಗೋಚರಿಸುತ್ತದೆ. ಸಮಾಜ ಎದುರಿಸುತ್ತಿರುವ ಹಲವಾರು ಸಮಸ್ಯೆಗಳಿಗೆ ಪರಿಹಾರ ನೀಡಬಲ್ಲ ಆಳ್ವಿಕೆಯನ್ನು ಭಾರತ ಇಂದು ಬಯಸುತ್ತದೆ. ದುರಾಡಳಿತ ಅನುಭವಿಸಿದಾಗಲೇ ಶೇಕಡ 9ರ ವೃದ್ಧಿದರ ಸಾಧಿಸುವ ಶಕ್ತಿ ಭಾರತಕ್ಕೆ ಇದ್ದರೆ, ರಾಜಕಾರಣದ ಹಾಗೂ ಆಳ್ವಿಕೆಯ ಗುಣಮಟ್ಟ ಸುಧಾರಿಸಿದರೆ ಅದರ ವೇಗ ಎಷ್ಟಿರಬಹುದು ಎಂದು ಊಹಿಸಬಹುದು. ಇನ್ನು ಹೆಚ್ಚಿನ ಮಾನವೀಯ ಮತ್ತು ಅನುಕಂಪದ ಗುಣಲಕ್ಷಣಗಳನ್ನು ಹೊಂದಿದ ಸಮಾಜ ಭಾರತದಲ್ಲಿ ರೂಪುಗೊಳ್ಳುವ ಆವಶ್ಯಕತೆಯಿದೆ. ನಮ್ಮ ನಡೆನುಡಿಯಲ್ಲಿ ಮಹಿಳೆಯರು ಮತ್ತು ದೀನದಲಿತರ ಕುರಿತು ಕಾಳಜಿ ಹೆಚ್ಚಬೇಕಿದೆ. ಮಹಿಳೆಯರ ವಿರುದ್ಧ ಹೆಚ್ಚುತ್ತಿರುವ ಅಪರಾಧಗಳು ಮತ್ತು ಪೈಶಾಚಿಕ ಕೃತ್ಯಗಳು ನಮ್ಮ ಸಮಾಜದ ಮೇಲೆ ಬರೆ ಎಳೆದಿವೆ. ಇಂತಹ ಹಲವಾರು ಸವಾಲುಗಳು ನಮ್ಮ ಮುಂದಿವೆ. ಈ ಸವಾಲುಗಳನ್ನು ಮೆಟ್ಟಿನಿಲ್ಲುವ ದೃಢನಿಶ್ಚಯವನ್ನು ನಾವು ಬೆಳೆಸಿಕೊಳ್ಳಬೇಕಾಗಿದೆ.

*************